O.S. No.78/2015
D.W-01

**ದಿನಾಂಕ:03/07/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ವಾದಿ ಪರ: ಶ್ರೀ.ಯು.ಸಿ.ಡಬ್ಲೂ. ವಕೀಲರಿಂದ:**

(**ನ್ಯಾಯಾಲಯದ ಟಿಪ್ಪಣಿಃ** ದಿನಾಂಕ 29-02-2024 ರಂದು ಸಾಕ್ಷಿಗೆ ವಾದಿ ಪರ ವಕೀಲರು ಅಸಲು ದಾವಾ ಸಂ. 15/2017 ರಲ್ಲಿಯ ಮಧ್ಯಂತರ ಅರ್ಜಿ ಸಂ.1 ರ ಮೇಲೆ ಆದ ಆದೇಶದ ದೃಢೀಕೃತ ನಕಲನ್ನು ತೋರಿಸಿದ್ದು, ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಒಪ್ಪಿ ಕೊಂಡಿದ್ದು, ನಂತರ ಅದನ್ನು ನಿಶಾನೆಯನ್ನಾಗಿ ಗುರುತಿಸಲು ಪ್ರತಿವಾದಿ ಪರ ವಕೀಲರು ತಕರಾರು ಎತ್ತಿದ್ದರಿಂದ ನ್ಯಾಯಾಲಯವು ಅ ಬಗ್ಗೆ ಉಭಯತರರ ವಾದ ಆಲಿಸಿ ದಿನಾಂಕ 03-04-2025 ರಂದು ವಾದಿಯು ಸದರಿ ದಾಖಲೆಯನ್ನು ಸಾಕ್ಷಿಗೆ ಕಾನಫ್ರಂಟ ಮಾಡಲು ಹಕ್ಕು ಹೊಂದಿದ್ದಾರೆ ಎಂದು ಆದೇಶಿಸಿದ್ದು, ಸಾಕ್ಷಿಯು ಸದರಿ ದಾಖಲೆಯನ್ನು ದಿನಾಂಕ 29-02-2024 ರಂದು ಈಗಾಗಲೇ ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು ಈಗ ನಿ.ಪಿ. 8 ಎಂದು ಗುರುತಿಸಲಾಯಿತು. )

ನಾನು ಮತ್ತು ಉಳಿದ ಪ್ರತಿವಾದಿಯರು ಸೇರಿ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ ಭಾಲ್ಕಿಯಲ್ಲಿ ಅಸಲು ದಾವಾ ಸಂಃ 15/2017 ನ್ನು ಒಟ್ಟು 14 ಜನರ ವಿರುದ್ದ ಸಲ್ಲಿಸಿದ್ದೇವೆ ಹಾಗೂ ಅದು ಇನ್ನೂ ಚಾಲ್ತಿಯಲ್ಲಿ ಇದೆ ಎಂದರೆ ಸರಿ. ಸದರಿ ದಾವೆಯಲ್ಲಿಯ ಸರ್ವೆ ನಂಬರ ಮತ್ತು ಈ ದಾವೆಯಲ್ಲಿಯ ಸರ್ವೆ ನಂಬರ ಒಂದೇ ಆಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಸರ್ವೆ ನಂಬರಿನ ಜಮೀನನ್ನು ಹೊರತುಪಡಿಸಿ ಬೇರೆ ಸರ್ವೆ ನಂಬರಿನ ಜಮೀನುಗಳೂ ಸಹ ಅಸಲು ದಾವಾ ಸಂಃ 15/2017 ರಲ್ಲಿ ಇರುತ್ತವೆ ಎನ್ನುತ್ತಾರೆ.

ಕಸ್ತೂರಿಬಾಯಿ, ಸರಸ್ವತಿ, ಶೋಭಾವತಿ, ರಾಜೇಶ್ರಿ ಮತ್ತು ಜಯಶ್ರೀ ರವರು ನನ್ನ ಅತ್ತೆಯಂದಿರು ಮತ್ತು ಅಕ್ಕ ತಂಗಿಯರು ಇರುತ್ತಾರೆ. ಮೇಲೆ ಹೇಳಿದ ಸದರಿ ವ್ಯಕ್ತಿಗಳು ನನ್ನ ಮತ್ತು ಉಳಿದ ಪ್ರತಿವಾದಿಗಳ ವಿರುದ್ದ ಡಿ.ಸಿ. ನ್ಯಾಯಾಲಯದಲ್ಲಿ ಪ್ರಕರಣ ಸಲ್ಲಿಸಿದ್ದಾರೆ ಎಂದರೆ ಸರಿ. ಅದೇ ರೀತಿ ನಾವೂ ಸಹ ಡಿ.ಸಿ.

ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಡಿ.ಸಿ. ನ್ಯಾಯಾಲಯದಲ್ಲಿನ ಎರಡು ಮೇಲ್ಮನವಿಗಳು ವಜಾಗೊಂಡಿವೆ ಎನ್ನುವದು ಗೊತ್ತಿಲ್ಲ. ಅಸಲು ದಾವಾ ಸಂಃ 15/2017 ರಲ್ಲಿ ನಾವು ಸಲ್ಲಿಸಿದ ಮಧ್ಯಂತರ ಅರ್ಜಿ ಸಂ.1 ವಜಾಗೊಂಡಿದೆ ಎನ್ನುವದು ಗೊತ್ತಿಲ್ಲ. ಸದರಿ ಆದೇಶದಲ್ಲಿ ಈ ದಾವೆಯ ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ರೀತಿಯ ಹಕ್ಕು ಸ್ವಾಧೀನ ಇಲ್ಲ ಎಂದು ವಜಾಗೊಂಡಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ.

ಅಣ್ಣೆಪ್ಪ ತಂ. ಗುರುಪಾದಪ್ಪ ಎನ್ನುವವರು ನನಗೆ ಗೊತ್ತಿಲ್ಲ. ಆದರೆ ಅವರ ಹೆಸರು ಕೇಳಿದ್ದೇನೆ. ವಾದಿಯ ತಂದೆಯ ಹೆಸರು ಅಣ್ಣೆಪ್ಪ ಎಂದರೆ ಸರಿ. ವಾದಿಯ ಅಜ್ಜನ ಹೆಸರು ಗುರುಪಾದಪ್ಪ ಎಂದರೆ ಸರಿ. ವಾದಿಯು ಸರ್ವೆ ನಂ.28/7 ಕ್ಕೆ ಸಂಬಂಧಿಸಿ 01-ಎಕರೆ 38-ಗುಂಟೆ ಬಾಬ್ತು ದಾವೆ ಸಲ್ಲಿಸಿದ್ದಾನೆ. ಸಾಕ್ಷಿಗೆ ನಿ.ಪಿ.1 ನ್ನು ತೋರಿಸಿ ಸದರಿ ದಾಖಲೆ ದಾವಾ ಆಸ್ತಿಯ ಫಾರ್ಮ ನಂ-10 ಎಂದು ಸೂಚಿಸಲಾಗಿ ಸಾಕ್ಷಿ ತನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ನಿ.ಪಿ.1 ರಲ್ಲಿ ಅಣ್ಣೆಪ್ಪ ಗುರುಪಾದಪ್ಪ ಎಂದು ಬರೆಯಲಾಗಿದೆ. ನಿ.ಪಿ.2 ರ ದಾಖಲೆಯು ದಾವಾ ಸರ್ವೆ ನಂ.28 ರ ಎಲ್ಲಾ ಹಿಸ್ಸೆಗಳ ಫಾರ್ಮ ನಂ-10 ಆಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಫಾರ್ಮ ನಂ-10 ಎನ್ನುವದು ಯಾವ ದಾಖಲೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವ ರೀತಿಯ ಸಂಬಂಧ ಎಂದರೆ ಸಾಕ್ಷಿಯು ದಾವಾ ಸ್ವತ್ತು ತನ್ನ ಪಿತ್ರಾರ್ಜಿತ ಸ್ವತ್ತು ಎನ್ನುತ್ತಾರೆ. ದಾವಾ ಸ್ವತ್ತನ್ನು ಸರ್ವೆ ಮಾಡಿಸಲು ನಾನು ಯಾವತ್ತು ಅರ್ಜಿ ಸಲ್ಲಿಸಿಲ್ಲ.

ವಾದಿ, ಆತನ ತಂದೆ ಮತ್ತು ಆತನ ಅಜ್ಜ ದಾವಾ ಸ್ವತ್ತಿನ ಸರ್ವೆ ಮಾಡಿಸಲು ಅರ್ಜಿ ಕೊಟ್ಟಿದ್ದರಿಂದಲೇ ದಾವಾ ಸ್ವತ್ತಿನ ಫಾರ್ಮ ನಂ-10 ನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿಯವರು ಆ ರೀತಿ ಅರ್ಜಿ ಕೊಟ್ಟಿದ್ದರಿಂದ ಸರ್ವೆಯವರು ದಾವಾ ಆಸ್ತಿಗೆ ಬಂದು ಸರ್ವೆ ಮಾಡಿ, ವಾದಿ ದಾವಾ ಸ್ವತ್ತಿನ ಕಬಜೆಯಲ್ಲಿ ಇರುತ್ತಾರೆ ಎಂದು ಫಾರ್ಮ ನಂ-10 ನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಮೊದಲಿನಿಂದಲೂ ಸಹ ದಾವಾ ಸ್ವತ್ತು ವಾದಿ, ವಾದಿಯವರ ತಂದೆ ಹಾಗೂ ವಾದಿಯ ಅಜ್ಜನಿಗೆ ಸೇರಿದ ಆಸ್ತಿ

ಆಗಿದ್ದು, ಅವರೆ ದಾವಾ ಸ್ವತ್ತಿನ ಮಾಲೀಕತ್ವ ಮತ್ತು ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.)

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ. ಹೇ. ಕೇ. ಸರಿ ಇದೆ**

**ಸಿವಿಲ್ ಮತ್ತು ಜೆ.ಎಮ್.ಎಫ.ಸಿ ನ್ಯಾಯಾಧೀಶರು**
**ಭಾಲ್ಕಿ.**